# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 992

02. ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು : **ಶ್ರೀ ಮರಿತಿಬ್ಬೇಗೌಡ**
(ಶಿಕ್ಷಕರ ಕ್ಷೇತ್ರ)

03. ಉತ್ತರಿಸುವ ದಿನಾಂಕ : 14.12.2023

04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | 2020-21 ನೇ ಸಾಲಿನಲ್ಲಿ ಬೆಂಗಳೂರಿನ ಹುಳಿಮಾವು ಆರಕ್ಷಕ ಠಾಣಾ ವ್ಯಾಪ್ತಿಯಲ್ಲಿನ ಕಾರ್ಯ ನಿರ್ವಹಿಸುತ್ತಿದ್ದ ಇನ್ಸ್‌ಪೆಕ್ಟರ್‌ರವರು ಭೂಗಳ್ಳರ ಜೊತೆ ಶಾಮೀಲಾಗಿ ಹಲವಾರು ಸರ್ಕಾರಿ ಸ್ವತ್ತುಗಳಿಗೆ ಅನಧಿಕೃತವಾಗಿ ಬೇಲಿ ಹಾಕಿಸಿರುವ ಸಂಬಂಧ ಪೊಲೀಸ್ ದೂರುಗಳ ಪ್ರಾಧಿಕಾರದಲ್ಲಿ ದೂರುಗಳು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | 2020-21 ನೇ ಸಾಲಿನಲ್ಲಿ ಬೆಂಗಳೂರಿನ ಹುಳಿಮಾವು ಆರಕ್ಷಕ ಠಾಣಾ ವ್ಯಾಪ್ತಿಯಲ್ಲಿನ ಕಾರ್ಯ ನಿರ್ವಹಿಸುತ್ತಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ರವರಾದ ಶ್ರೀ ಮಹೇಶ್ ಕನಕಗಿರಿ ರವರ ವಿರುದ್ದ ಈ ವಿಷಯಕ್ಕೆ ಸಂಬಂಧಿಸಿದಂತೆ ಪೊಲೀಸ್ ದೂರುಗಳ ಪ್ರಾಧಿಕಾರದಲ್ಲಿ ದೂರುಗಳು ದಾಖಲಾಗಿರುವುದಿಲ್ಲ. |
| ಆ | ಭೂಗಳ್ಳರ ಪರವಾಗಿ ಕಾರ್ಯ ನಿರ್ವಹಿಸುತ್ತಾ, ಸದನಕ್ಕೆ ತಪ್ಪು ಮಾಹಿತಿ ನೀಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?. | ಹುಳಿಮಾವು ಪೊಲೀಸ್ ಠಾಣೆಯಲ್ಲಿ 2020-21ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ರವರಾದ ಶ್ರೀ ಮಹೇಶ್ ಕನಕಗಿರಿ ರವರು 143ನೇ ಅಧಿವೇಶನದಲ್ಲಿ ಪ್ರಸ್ತಾಪಿಸಲಾದ ನಿಯಮ-72ರ ಅಡಿಯಲ್ಲಿ ( ಹಕ್ಕು ಭಾದ್ಯತಾ ಸಮಿತಿ ಪ್ರಕರಣ) ನೀಡಿದ್ದ ಸೂಚನೆಗೆ ತಪ್ಪು ಮಾಹಿತಿ ನೀಡಿರುವ ಸಂಬಂಧ ಇವರ ವಿರುದ್ಧ ಡಿಸಿಪಿ ಆಗ್ನೇಯ ವಿಭಾಗ ರವರಿಂದ ಕೆ.ಎಸ್.ಪಿ (ಡಿ.ಸಿ) ನಿಯಮ-7ರ ಪ್ರಕಾರ ದಿನಾಂಕ: 31-10-2023 ರಂದು ಶಿಸ್ತು ಕ್ರಮ ಜರುಗಿಸಲಾಗಿರುತ್ತದೆ. |
| ಇ | ಹಲವಾರು ಪಿರ್ಯಾದುದಾರರು ಭೂಗಳ್ಳರ ವಿರುದ್ದ ದೂರುಗಳನ್ನು ನೀಡಿದ್ದರೂ ಎಫ್.ಐ.ಆರ್ ದಾಖಲು ಮಾಡದೇ ಎನ್.ಸಿ.ಆರ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?. | ಹುಳಿಮಾವು ಪೊಲೀಸ್ ಠಾಣೆಯಲ್ಲಿ ಯಾವುದೇ ಪಿರ್ಯಾದುದಾರರು ಭೂಗಳ್ಳರ ವಿರುದ್ದವಾಗಲೀ ಅಥವಾ ಇತರೆ ಯಾವುದೇ ವ್ಯಕ್ತಿಗಳ ವಿರುದ್ದವಾಗಲೀ ದೂರು ನೀಡಿದ್ದಲ್ಲಿ ದೂರನ್ನು ಸ್ವೀಕರಿಸಿ ಸದರಿ ದೂರು ಸಂಜ್ಞೇಯ ಅಪರಾಧವಾಗಿದ್ದಲ್ಲಿ ಕೂಡಲೇ ಎಫ್.ಐ.ಆರ್‌ನ್ನು ದಾಖಲಿಸಿ ತನಿಖೆ ಕೈಗೊಳ್ಳಲಾಗುತ್ತಿರುತ್ತದೆ ಹಾಗೂ ದೂರುಗಳು ಅಸಂಜ್ಞೇಯವಾಗಿದ್ದಲ್ಲಿ ಎನ್.ಸಿ.ಆರ್ ಪ್ರಕರಣಗಳನ್ನು ದಾಖಲಿಸಲಾಗುತ್ತಿರುತ್ತದೆ. |
| ಈ | ಸದರಿ ಅಧಿಕಾರಿಯ ಮೇಲೆ ಅನೇಕ ದೂರುಗಳು ದಾಖಲಾಗಿದ್ದರೂ, ಸದರಿಯವನ್ನು ಸದರಿ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿಯೇ ಸ್ಥಳ ನಿಯುಕ್ತಿಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? | ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಕರ್ನಾಟಕ ರಾಜ್ಯ, ಬೆಂಗಳೂರು ರವರ ಕಛೇರಿ ಆದೇಶ ಸಂಖ್ಯೆ :ಹೆಚ್.ಆರ್.ಎಂ-1(2)/05/2022-23, ಓ.ಬಿ.ಸಂ :581/2023, ದಿನಾಂಕ:03-10-2023 ರೀತ್ಯಾ ಪಿ.ಐ ಮಹೇಶ್ ಕನಕಗಿರಿ ರವರನ್ನು ಹುಳಿಮಾವು ಪೊಲೀಸ್ ಠಾಣೆಯಿಂದ ಬೇರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಂಡೇಪಾಳ್ಯ ಪೊಲೀಸ್ ಠಾಣೆಗೆ ಸ್ಥಳ ನಿಯುಕ್ತಿಗೊಳಿಸಿರುತದೆ |

| | | |
|---|---|---|
| ಉ | ಸದರಿ ಅಧಿಕಾರಿಯ **'ಅಕ್ರಮಗಳ ಸಂಬಂಧ'** ಇದುವರೆಗೂ ಎಷ್ಟು ಪ್ರಕರಣಗಳು ದಾಖಲಾಗಿವೆ ?. ಸದರಿ ಪ್ರಕರಣಗಳು ಯಾವ ಹಂತದಲ್ಲಿವೇ?. ಅವರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?. | ಪೊಲೀಸ್ ಇನ್ಸ್‌ಪೆಕ್ಟರ್ ಮಹೇಶ್ ಕನಕಗಿರಿ ರವರ ವಿರುದ್ಧ **'ಅಕ್ರಮಗಳ ಸಂಬಂಧ'** ಪ್ರಕರಣಗಳು ದಾಖಲಾಗಿರುವುದಿಲ್ಲ.<br><br>ಆದರೆ, ಪೊಲೀಸ್ ಇಲಾಖೆಯ ಕರ್ತವ್ಯ ನಿರ್ವಹಣೆಯಲ್ಲಿ ಅಶಿಸ್ತು ಮತ್ತು ನಿರ್ಲಕ್ಷತೆಗಾಗಿ ಸದರಿಯವರ ವಿರುದ್ಧ ಕೆ.ಎಸ್.ಪಿ (ಡಿ.ಪಿ) ನಿಯಮ-7ರಡಿ ಒಟ್ಟು 13 ಬಾರಿ ಶಿಸ್ತು ಕ್ರಮವನ್ನು ಜರುಗಿಸಲಾಗಿದೆ ಹಾಗೂ 01 ಬಾರಿ ಅಮಾನತ್ತುಗೊಳಿಸಲಾಗಿದೆ. |

ಸಂಖ್ಯೆ: ಒಇ 320 ಪಿಇಎಂ 2023

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು